ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

27

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ – ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 26/9/20

# ಬಿಹಾರ ಫೈಟ್‌ಗೆ ದಿನ ಫಿಕ್ಸ್

ಉದಯ 26/9/20

## ಅ.28, ನ.3, ನ.7ರಂದು ಮತದಾನ

## ನ.10ರಂದು ಫಲಿತಾಂಶ ಪ್ರಕಟ




### ಆನ್‌ಲೈನ್‌ನಲ್ಲೇ ನಾಮಪತ್ರ

ಈ ಬಾರಿ ಅಭ್ಯರ್ಥಿಗಳು ಆನ್‌ಲೈನ್‌ನಲ್ಲೇ ನಾಮಪತ್ರ ಸಲ್ಲಿಸಬಹುದು. ಠೇವಣಿಯನ್ನೂ ಆನ್‌ಲೈನ್ ಮೋಡ್‌ನಲ್ಲೇ ಹಾಕಬಹುದು. ನಾಮಪತ್ರ ಸಲ್ಲಿಕೆಗೆ ಬರುವಂಥ ಅಭ್ಯರ್ಥಿಗಳು ತಮ್ಮ ಜತೆಗೆ ಇಬ್ಬರನ್ನು ಹಾಗೂ ಎರಡೇ ವಾಹನಗಳನ್ನು ತರಬಹುದು. ಮನೆ ಮನೆ ಪ್ರಚಾರದ ವೇಳೆ ಐವರು ಮಾತ್ರ ತೆರಳಬೇಕು.

**ನವದೆಹಲಿ:** ಕೊರೊನಾ ಸೋಂಕಿನ ನಡುವೆಯೇ ಬಿಹಾರ ವಿಧಾನಸಭೆ ಚುನಾವಣೆಗೆ ಅ.28ರಿಂದ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಅ.28, ನ.3 ಮತ್ತು ನ.7ರಂದು ಮತದಾನ ನಡೆದರೆ, ನ.10ರಂದು ಫಲಿತಾಂಶ ಹೊರಬೀಳಲಿದೆ.

ಶುಕ್ರವಾರ ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಆರೋರಾ ಅವರು ಪತ್ರಿಕಾಗೋಷ್ಠಿಯಲ್ಲಿ ದಿನಾಂಕ ಘೋಷಿಸಿದ್ದಾರೆ. ಸಾಮಾಜಿಕ ಅಂತರ, ಗರಿಷ್ಠ ಪ್ರಮಾಣದ ಭದ್ರತೆಯೊಂದಿಗೆ ಈ ಚುನಾವಣೆ ನಡೆಯಲಿದೆ ಎಂಬುದು ವಿಶೇಷ.

**ಒಂದು ಗಂಟೆ ಹೆಚ್ಚಳ:** ಮತದಾನ ಅವಧಿಯನ್ನು ಒಂದು ಗಂಟೆ ಹೆಚ್ಚಿಸಲಾಗಿದೆ. ಬೆ.7ರಿಂದ ಸಂಜೆ 6ರ ವರೆಗೆ ಮತದಾನಕ್ಕೆ ಅವಕಾಶ ನೀಡಲಾಗುತ್ತದೆ. ಕೋವಿಡ್19 ಸೋಂಕಿತರಿಗೆ ದಿನದ ಕೊನೇ ಅವಧಿಯಲ್ಲಿ ಮತದಾನಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಈ ಸಂದರ್ಭದಲ್ಲಿ ಹೆಚ್ಚಿನ ಎಚ್ಚರಿಕೆ ಹಾಗೂ ಆರೋಗ್ಯಾಧಿಕಾರಿಗಳ ಪರಿವೀಕ್ಷಣೆಯಲ್ಲಿ ಮತದಾನ ಮಾಡಿಸಲಾಗುತ್ತದೆ.

**ಸಿಬ್ಬಂದಿಗೆ ವಿಶೇಷ ಕಿಟ್:** ಸೋಂಕಿನಿಂದ ಚುನಾವಣಾ ಕರ್ತವ್ಯದಲ್ಲಿರುವ ಸಿಬ್ಬಂದಿ ರಕ್ಷಿಸುವ ನಿಟ್ಟಿನಲ್ಲಿ ಅವರಿಗೆ ಆಯೋಗ ವಿಶೇಷ ಕಿಟ್ ನೀಡಲಿದೆ. ಅದರಲ್ಲಿ ಎನ್-95 ಮಾಸ್ಕ್, ಸ್ಯಾನಿಟೈಸರ್, ಕೈಗವಸುಗಳು, ಸ್ವಿಚ್‌ಗಳನ್ನು ಕೈಗಳಿಂದ ಅದುಮುವುದನ್ನು ತಪ್ಪಿಸಲು ಕೀಲಿ ಕೈಯಂತೆ ಇರುವ ವಸ್ತುವನ್ನೂ ನೀಡಲಾಗುತ್ತದೆ.

> **ಈಗಿನಿಂದಲೇ ನೀತಿ ಸಂಹಿತೆ ಜಾರಿಯಾಗಿದೆ. ದ್ವೇಷಪೂರಿತ ಭಾಷಣ ಮತ್ತು ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.**
>
> **• ಸುನಿಲ್ ಆರೋರಾ,**
>
> **ಮುಖ್ಯ ಚುನಾವಣಾ ಆಯುಕ್ತ**

**ಸೆ.29ಕ್ಕೆ ನಿರ್ಧಾರ:** ಲೋಕಸಭೆಯ 1 ಕ್ಷೇತ್ರ, ಮಧ್ಯಪ್ರದೇಶದ 27, ಗುಜರಾತ್ ಮತ್ತು ಉತ್ತರ ಪ್ರದೇಶದ ತಲಾ 8, ಮಣಿಪುರದ 5, ಅಸ್ಸಾಂ, ಜಾರ್ಖಂಡ್, ಕೇರಳ, ನಾಗಾಲ್ಯಾಂಡ್, ತಮಿಳುನಾಡು, ಒಡಿಶಾಗಳಲ್ಲಿರುವ ತಲಾ 2, ಕರ್ನಾಟಕ, ಛತ್ತೀಸ್‌ಗಡ, ಹರ್ಯಾಣ, ಪಶ್ಚಿಮ ಬಂಗಾಳ ರಾಜ್ಯಗಳ ತಲಾ 1 ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆ ಬಗ್ಗೆ ಸೆ.29ರಂದು ನಿರ್ಧರಿಸಲಾಗುತ್ತದೆ ಎಂದು ಸುನಿಲ್ ಆರೋರಾ ತಿಳಿಸಿದ್ದಾರೆ.